**ಕರ್ನಾಟಕ ಸರ್ಕಾರ**

**ತಹಶೀಲ್ದಾರರು, ಸಿರುಗುಪ್ಪ ಇವರ ನ್ಯಾಯಾಲಯ, ಸಿರುಗುಪ್ಪ.**

**ಂ.ಕಂ/ಹಬ/ವಿವಾದ/53/2015-16** **ದಿ:25-07-2016**

| **ವಾದಿಗಳು** | **ವಿರುದ್ದ** | **ಪ್ರತಿವಾದಿಗಳು** |
|---|---|---|
| ಂಕಾರಮ್ಮ ಗಂಡ ಗುಂಜಳ್ಳಿ ನಾಗರಾಜ.<br>ಲ್ಲಕೂಡ್ಲೂರು ಗ್ರಾಮ.<br>ಿರುಗುಪ್ಪ (ತಾ) | | 1.ಸುರೇಶರೆಡ್ಡಿ ತಂದೆ ಕಾಂತರೆಡ್ಡಿ<br>14 ನೇ ವಾರ್ಡ್,ಎಸ್.ಎಸ್.ನಗರ<br>ಸಿರುಗುಪ್ಪ ನಗರ.<br>2.ಗುಂಜಳ್ಳಿ ನಾಗರಾಜ ತಂದೆ<br>ಬಸವನಗೌಡ. ಚಲ್ಲಕೂಡ್ಲೂರು |

**ಾವಾ ಜಮೀನಿನ ವಿವರ**

| ತಾಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ | ತರಹೆ |
|---|---|---|---|---|
| ಸಿರುಗುಪ್ಪ | ಚಲ್ಲಕೂಡ್ಲೂರು | 160 | 8-15 | ಖುಷ್ಕಿ |

ೀಠಿಕೆ;-

ಸಿರುಗುಪ್ಪ ತಾಲೂಕು ಚಲ್ಲಕೂಡ್ಲೂರು ಗ್ರಾಮದ ಸ,ನಂ.160 ವಿ:8-15 ಎಕ್ರೆ ಜಮೀನಿಗೆ ೋಂದಣಿ ಕ್ರಯಪತ್ರ ಸಂಖ್ಯೆ:4906/2015-16 ದಿನಾಂಕ:15-10-2015 ರ ಪ್ರಕಾರ ಹಾಲಿ ಟ್ಟಾದಾರರಾದ **ಗುಂಜಳ್ಳಿ ನಾಗರಾಜ ತಂದೆ ಗುಂಜಳ್ಳಿ ಬಸವನಗೌಡ** ಇವರಿಂದ **ಸುರೇಶರೆಡ್ಡಿ ತಂದೆ ಾಂತರೆಡ್ಡಿ** ಇವರು ಕ್ರಯ ನೋಂದಣಿ ಹೊಂದಿದ್ದು, ಕ್ರಯದಾರರ ಹೆಸರಿಗೆ ಹಕ್ಕುಬದಲಾವಣೆ ಮಾಡಲು, ಾಲೂಕು ಕಛೇರಿ ಭೂಮಿ ಗಣಕೀಕರಣ ಶಾಖೆಯಿಂದ ಕಂದಾಯ ನಿರೀಕ್ಷಕರು ಹಚ್ಚೊಳ್ಳಿ ಇವರಿಗೆ ೇಕ್‌ಲಿಸ್ಟ್‌ನ್ನು ಕಳುಹಿಸಲಾಗಿ ಕರ್ನಾಟಕ ಭೂ-ಕಂದಾಯ ನಿಯಮಗಳು 1966 ರ ನಿಯಮ 65 ರಂತೆ ಮೂನೆ 21 ರ ನೋಟೀಸನ್ನು ಗ್ರಾ,ಲೆ. ಚಲ್ಲಕೂಡ್ಲೂರು ಇವರು ಗ್ರಾಮದಲ್ಲಿ ಪ್ರಚುರಪಡಿಸಿರುತ್ತಾರೆ. ಸದ್ರಿ ಪ್ರಕರಣದಲ್ಲಿ ಹಕ್ಕು ಬದಲಾವಣೆ ಮಾಡುವ ಸಮಯದಲ್ಲಿ ನಿಗದಿತ ಅವಧಿಗೆ ಮುಂಚೆ **ಓಂಕಾರಮ್ಮ ಂಡ ಗುಂಜಳ್ಳಿ ನಾಗರಾಜ** ಇವರು "ಪ್ರಸ್ತಾಪಿತ ಜಮೀನನ್ನು ತನ್ನ ಪತಿಯು ತಮಗೆ ಗೊತ್ತಿಲ್ಲದೇ ಾರಿದ್ದು, ಕ್ರಯದಾರರ ಹೆಸರಿಗೆ ಹಕ್ಕು ಬದಲಾವಣೆ ಮಾಡಬಾರದೆಂದು" ದಿನಾಂಕ:19-11-2015 ಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ಕಂದಾಯ ನಿರೀಕ್ಷಕರು ಹಚ್ಚೊಳ್ಳಿ ಇವರು ಸದ್ರಿ ಪ್ರಕರಣವನ್ನು ವಾದಾಸ್ಪದವೆಂದು ಪರಿಗಣಿಸಿ ಹ,ಬ.ಸಂಖ್ಯೆ:07/2015-16 ದಿನಾಂಕ:21-11-2015 ರ ಪ್ರಕಾರ ಈ ್ಯಾಯಾಲಯಕ್ಕೆ ಕಡತವನ್ನು ಸಲ್ಲಿಸಿರುತ್ತಾರೆ.

ಸದ್ರಿ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ನೋಂದಾಯಿಸಿಕೊಂಡು ಕರ್ನಾಟಕ ಭೂ-ಂದಾಯ ನಿಯಮಗಳು 1966 ರ ನಿಯಮ 67 ಮತ್ತು 43 ರಂತೆ ಪ್ರಕರಣದಲ್ಲಿನ ವಾದಿ ಮತ್ತು ್ರತಿವಾದಿಗಳಿಗೆ ನೋಟೀಸುಗಳನ್ನು ಜಾರಿ ಮಾಡಿ ಪ್ರಕರಣದ ವಿಚಾರಣೆಯನ್ನು ದಿ:28-03-2016 ರಿಂದ

-06-2016 ರ ವರೆಗೆ ವಿಚಾರಣೆಗೆ ತೆಗೆದುಕೊಳ್ಳಲಾಯಿತು. ವಾದಿ, ಪ್ರತಿವಾದಿಗಳು ಮತ್ತು ವಿಚಾರಣೆಗೆ ಜರಾಗಿರುತ್ತಾರೆ.

ಸದ್ರಿ ಪ್ರಕರಣದಲ್ಲಿ ದಾಖಲೆ ಪರಿಶೀಲಿಸಿ ವಾದಿ, ಪ್ರತಿವಾದಿಗಳ ವಾದ ಆಲಿಸಲಾಯಿತು. ವಾದಿ ಕಾರಮ್ಮ ಇವರು ಮೊದಲಿಗೆ ದಾವಾ ಜಮೀನನ್ನು ಹಕ್ಕು ಬದಲಾವಣೆ ಮಾಡಬಾರದೆಂದು ತಕರಾರು ದ್ದು, ನಂತರ ದಿ:20-06-2016 ರಂದು ತಾವು ರಾಜೀಯಾಗುವುದಾಗಿ ತಿಳಿಸಿದ ಮೇರೆಗೆ ಲಿಖಿತ ಳಿಕೆ ನೀಡಲು ಸೂಚಿಸಲಾಗಿ, ದಿನಾಂಕ:21-06-2016 ರಂದು ನೋಟರಿ ಸಮಕ್ಷಮ "ಕ್ರಯದಾರರ ಸರಿಗೆ ಹಕ್ಕು ಬದಲಾವಣೆ ಮಾಡಲು ತನ್ನ ಯಾವುದೇ ರೀತಿಯ ಆಕ್ಷೇಪಣೆಗಳು ಇರುವುದಿಲ್ಲವೆಂದು" ಮಾಣಿಕರಿಸಿದ ಅಫಿಡೆವಿಟ್ ಹಾಜರುಪಡಿಸಿರುತ್ತಾರೆ.

ಆದ್ದರಿಂದ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 128, 129 ರ ಅಡಿ, ಸಿರುಗುಪ್ಪ ಲೂಕು ಚಲ್ಲಕೂಡ್ಲೂರು ಗ್ರಾಮದ ಸ,ನಂ.160, ವಿ:8-15 ಎಕ್ರೆ ಜಮೀನಿಗೆ ನೋಂದಣಿ ಕ್ರಯಪತ್ರ ಖ್ಯೆ:4906/2015-16 ದಿನಾಂಕ:15-10-2015 ರ ಪ್ರಕಾರ ಕ್ರಯ್ದ್ದಾರರ ಹೆಸರಿಗೆ ಹಕ್ಕುಬದಲಾವಣೆ ಾಡಲು ಈ ಕೆಳಕಂಡ ಆದೇಶ-

**.ಕಂ/ಹಬ/ವಿವಾದ/53/2015-16** **ದಿ:25-07-2016**

**<u>ಆದೇಶ</u>**

ಪೀಠಿಕೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆ, ವಾಸ್ತವಾಂಶ ಹಾಗೂ ದಾಖಲೆಗಳನ್ವಯ ಸಿರುಗುಪ್ಪ ಲೂಕು ಚಲ್ಲಕೂಡ್ಲೂರು ಗ್ರಾಮದ ಸ,ನಂ.160, ವಿ:8-15 ಎಕ್ರೆ ಜಮೀನಿಗೆ ನೋಂದಣಿ ಕ್ರಯಪತ್ರ ಖ್ಯೆ:4906/2015-16 ದಿನಾಂಕ:15-10-2015 ರ ಪ್ರಕಾರ ಹಾಲಿ ಪಟ್ಟಾದಾರರಾದ **ಗುಂಜಳ್ಳಿ ನಾಗರಾಜ ಂದೆ ಗುಂಜಳ್ಳಿ ಬಸವನಗೌಡ** ಇವರಿಂದ **ಸುರೇಶರೆಡ್ಡಿ ತಂದೆ ಕಾಂತರೆಡ್ಡಿ** ಇವರು ಹೊಂದಿದ ನೋಂದಣಿ ಯಪತ್ರದಂತೆ, ಕ್ರಯದಾರರ ಹೆಸರಿಗೆ ಹಕ್ಕುಬದಲಾವಣೆ ಮಾಡಲು, ಆದೇಶಿಸಿದೆ.

ಈ ಆದೇಶ ಹೇಳಿ ಬರೆಯಿಸಿ, ಬೆರಳಚ್ಚು ಮಾಡಿ, ತಪ್ಪುಗಳನ್ನು ತಿದ್ದಿ ದಿ:25-07-2016 ರಂದು ದ ನ್ಯಾಯಾಲಯದಲ್ಲಿ ಬಹಿರಂಗವಾಗಿ ಘೋಷಿಸಿದೆ.

M. [signature]

**ತಹಶೀಲ್ದಾರರು,ಸಿರುಗುಪ್ಪ**

1.ಭೂಮಿ ಗಣಕೀಕರಣ ಶಾಖೆಗೆ ಸೂಕ್ತ ಕ್ರಮಕ್ಕಾಗಿ
2.ವಾದಿ-ಪ್ರತಿವಾದಿಗಳಿಗೆ
3.ಕಛೇರಿ ಕಡತಕ್ಕೆ

Sureshreddy